OS No.67/2020
PW-3

(ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

**<u>ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಬಿ ಎಂ ಎ ವಕೀಲರಿಂದಃ-</u>**

1. ನಾನು ಉಪನಾಯಕನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ದಾವೆಯನ್ನು ವಾದಿಯು ತನ್ನ ಸಹೋದರರ ಮೇಲೆ ದಾವೆ ದಾಖಲಿಸಿದ್ದಾರೆ ಅವರ ಹೆಸರು ಕಲ್ಲಪ್ಪ, ತಿಂದಪ್ಪ ಮತ್ತು ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ. ಈ ದಾವೆಯಲ್ಲಿ ಒಟ್ಟು 5 ಸರ್ವೆ ನಂಬರುಗಳು ಇವೆ ಅದರ ನಂಬರು ವಿಸ್ತೀರ್ಣ ಮತ್ತು ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ಯಾವ ಯಾವ ಜಮೀನುಗಳು ಯಾರ ಯಾರ ಹೆಸರಿನಲ್ಲಿರುತ್ತವೆ ಎಂದು ನಾನು ದಾಖಲೆ ನೋಡಿಲ್ಲ. ಹನುಮವ್ವ ವಾದಿಯು ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನನಗೆ ಈ ದಾವೆಯಲ್ಲಿ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ವಾದಿ ನಂ 1(ಎ) ನನಗೆ ಆತ್ಮೀಯವಾಗಿರುವುರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗುಂಡೂರು ನಿಂಗಪ್ಪ ಇವರಿಗೆ ದಾವಾ ಅಸ್ತಿಗಳು ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ